ಮೈಸೂರು - ಶಿಕಾರಿಪುರ ರಸ್ತೆಯ ದುರಸ್ಥಿ

2318 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರು - ಶಿಕಾರಿಪುರ ರಸ್ತೆಯಲ್ಲಿ ಹಿರೇಕೆರೂರು ತಾಲ್ಲೂಕು ಹಾದಿಯಲ್ಲಿ ಕೆಲವು ಕಡೆ ವಾಹನಗಳು ಓಡಾಡದಂತಹ ಪರಿಸ್ಥಿತಿ ನಿರ್ಮಾಣ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಯಾವಾಗ ದುರಸ್ತಿ ಮಾಡಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

1) ಇತ್ತೀಚಿನ ಬಾರಿ ಮಳೆಯಿಂದ ಮಾಸೂರ ಶಿಕಾರಿಪುರ ರಸ್ತೆಯಲ್ಲಿ ಹಿರೇಕೆರೂರು ತಾಲ್ಲೂಕು ಹಾದಿಯಲ್ಲಿ ಹಲವು ಕಡೆ ತಗ್ಗು (ಪಾಟ್‌ಹೋಲ್) ಗಳು ಬಿದ್ದು ವಾಹನಗಳು ಸರಾಗವಾಗಿ ಓಡಾಡಲು ತೊಂದರೆ ಆದದ್ದು ಸರ್ಕಾರದ ಗಮನಕ್ಕೆ ಬಂದಿದೆ.

2) ಸಧ್ಯ ಮಳೆಗಾಲವಿದ್ದುದರಿಂದ ರಸ್ತೆಯಲ್ಲಿ ಬಿದ್ದಂತಹ ತಗ್ಗುಗಳನ್ನು ತಕ್ಷಣ ಖಡಿ ಮತ್ತು ಮೂರ್ರಂದಿಂದ ತುಂಬಲು ಕ್ರಮ ಕೈಕೊಳ್ಳಲಾಗುವುದು. ಮಳೆಗಾಲದ ನಂತರ ಈ ರಸ್ತೆಯನ್ನು ದುರಸ್ತಿಗೊಳಿಸಲಾಗುವುದು.

ಬದಾಮಿಯಲ್ಲಿ ಹಾಲು ಉತ್ಪಾದಕರ ಸಂಘ

2319 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬದಾಮಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬದಾಮಿ ತಾಲ್ಲೂಕಿನಲ್ಲಿ ಎಷ್ಟು ಹಾಲು ಉತ್ಪಾದಕರ ಸಂಘಗಳು ಇವೆ, (ಗ್ರಾಮಗಳ ವಿವರ ನೀಡುವುದು)?

ಆ) ಇವುಗಳಲ್ಲಿ ಲಾಭದಾಯಕ ಸಂಘಗಳೆಷ್ಟು?

ಇ) ಸಂಘಗಳು ನಷ್ಟಕ್ಕೆ ಒಳಗಾಗಲು ಕಾರಣವೇನು?

ಈ) ಇದನ್ನು ಸರಿಪಡಿಸಲು ಸರಕಾರ, ಹಾಗೂ ಒಕ್ಕೂಟಗಳು ಏನು ಕ್ರಮ ಕೈಗೊಳ್ಳುತ್ತಿವೆ

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು)

ಅ) 48

ಆ) ಗ್ರಾಮಗಳ ವಿವರ ಅನಬಂಧದಲ್ಲಿ ನೀಡಿದೆ.

ಇ) ಲಾಭದಲ್ಲಿರುವ ಸಂಘಗಳು - 36.

1. ಸಂಘಗಳಲ್ಲಿ ಕಡಿಮೆ ಹಾಲು ಶೇಖರಣೆ

2. ಮೇವಿನ ಅಭಾವ

ಈ) 1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಮಗದಿಂದ 217 ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 158 ಸದಸ್ಯ ಫಲಾನುಭವಿಗಳಿಗೆ ಸುಧಾರಿತ ಎಮ್ಮೆ : ಮಿಶ್ರತಳಿ ರಾಸುಗಳನ್ನು ಖರೀದಿಸಿ ಕೊಡಲಾಗಿದೆ. ರಾಜ್ಯ ಸರ್ಕಾರದಿಂದ ಮಹಿಳಾ ಹಾಲು ಉತ್ಪಾದಕರಿಗೆ ಸಹಾಯ ಧನ ಪಡೆದಿದ್ದು, ಇದರಲ್ಲಿ 48 ಮಹಿಳೆಯರಿಗೆ, ವಿಶೇಷ ಘಟಕ ಯೋಜನೆಯಡಿಯಲ್ಲಿ 227 ಗಿರಿಜನ ಉಪಯೋಜನೆಯಡಿಯಲ್ಲಿ 08 ಮತ್ತು ಕೃಷಿ ಕಾಲೋನಿ ಯೋಜನೆಯಡಿಯಲ್ಲಿ 15 ಮಿಶ್ರ ತಳಿ ರಾಸು:ಎಮ್ಮೆಗಳನ್ನು ಖರೀದಿಸಿ ಕೊಡಲಾಗಿದೆ.

2. ತಾಲ್ಲೂಕಿನಲ್ಲಿ 14 ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲಿ ಕೃತಕ ಗರ್ಭಧಾರಣೆ ಸೌಲಭ್ಯವನ್ನು ಒದಗಿಸಲಾಗಿದೆ.

3. ರಾಸುಗಳಿಗೆ ರೋಗ ನಿಯಂತ್ರಣಕ್ಕಾಗಿ ತುರ್ತು ಪಶುವೈದ್ಯಕೀಯ ಸೌಲಭ್ಯವನ್ನು ನೀಡಲಾಗುತ್ತಿದೆ.

4. ತಾಲ್ಲೂಕಿನಲ್ಲಿ ರಾಸುಗಳ ಬಂಜೆತನ ನಿವಾರಣಾ ಶಿಬಿರಗಳನ್ನು ರೈತರ ಬೇಡಿಕೆಗನುಗುಣವಾಗಿ ವ್ಯವಸ್ಥೆ ಮಾಡಲಾಗುತ್ತಿದೆ.

5. ಹಾಲು ಉತ್ಪಾದನೆ ಹೆಚ್ಚಿಸಲು ಸಮತೋಲನ ಪಶು ಆಹಾರವನ್ನು ಸಂಘಗಳ ಮೂಲಕ ಸದಸ್ಯರಿಗೆ ಸರಬರಾಜು ಮಾಡಲಾಗುತ್ತಿದೆ.

6. ರೈತರು ಉತ್ಪಾದಿಸಿದ ಎಲ್ಲಾ ಹಾಲನ್ನು ಸಂಘವು ಖರೀದಿಸುತ್ತಿದೆ.

7. ಮೇವಿನ ಅಭಿವೃದ್ಧಿಗಾಗಿ ರೈತರಿಗೆ ಮೇವಿನ ಬೀಜ : ಬೇರುಗಳನ್ನು ಶೇ.25ರಷ್ಟು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3568ಕ್ಕೆ ಅನುಬಂಧ

ಬಿಜಾಪುರ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಬಿಜಾಪುರ ತಾಲ್ಲೂಕು : ಬಾದಾಮಿ

ಕ್ರಮ. ಸಂ.	ಹಾಲು ಉತ್ಪಾದಕರ ಸಂಘದ ಹೆಸರು ಮತ್ತು ಗ್ರಾಮ
1.	ನಾಗರಾಳ
2.	ಶಿರಬಡಗಿ
3.	ಪಟ್ಟದಕಲ್ಲು
4.	ಕೆಂದೂರ
5.	ಕುಟಕನಕೇರಿ
6.	ಕೆಲವಡಿ (ಕೆಲವಡಿ, ತಿಮ್ಮಸಾಗರ ಮತ್ತು ಲಿಂಗಾಪುರ ಗ್ರಾಮ)
7.	ಕಟಗೇರಿ
8.	ಮಂಗಳೂರು
9.	ನಂದಿಕೇಶ್ವರ
10.	ಹಂಸನೂರು
11.	ಆಲೂರ .ಎಸ್.ಕೆ.
12.	ರೆಡೇರ ತಿಮ್ಮಾಪುರ
13.	ನೀರಲಕೇರಿ
14.	ಗೋವನಕೊಪ್ಪ
15.	ಕಾಕನೂರ
16.	ಭೀರನೂರ
17.	ತಳಕವಾಡ
18.	ಕಿತ್ತಲಿ
19.	ನರಸಾಪುರ
20.	ಹೆಬ್ಬಳ್ಳಿ
21.	ಬಿ.ಎನ್. ಜಾಲಿಹಾಳ
22.	ಕಾತರಕಿ
23.	ಕಗಲಗೊಂಬ
24.	ಸೂಳಿಕೇರಿ

ಕ್ರಮ. ಸಂ.	ಹಾಲು ಉತ್ಪಾದಕರ ಸಂಘದ ಹೆಸರು ಮತ್ತು ಗ್ರಾಮ
25.	ಕೆರಕಲಮಟ್ಟಿ
26.	ಊಗಲವಾಟ
27.	ಮುಷ್ಟಿಗೇರಿ
28.	ಕಾಡರಕೊಪ್ಪ
29.	ಚಿಮ್ಮಲಗಿ
30.	ಜೊಳಚಗುಡ್ಡ (ಜೊಳಚಗುಡ್ಡ, ಹಿರೇನಸದಿ ಮತ್ತು ಚಿಕ್ಕನಸಬಿ ಗ್ರಾಮ)
31.	ಯರಗೊಪ್ಪ .ಎಸ್.ಬಿ.
32.	ಮುತ್ತಲಗೇರಿ
33.	ಮಮಟಗೇರಿ
34.	ಹಂಗರಗಿ
35.	ನೀಲಗುಂದ
36.	ಜಾಲಿಹಾಳ
37.	ಹೊಸೂರು
38.	ಡಾಣಕ್ಷೀರೂರ
39.	ಬೇಲೂರು
40.	ಮಣ್ಣೇರಿ
41.	ಯಂಕಂಚಿ ಮಣಿಸಾಗರ
42.	ಜಮ್ಮನ ಕಟ್ಟಿ
43.	ಹಿರೇಮುಚ್ಚಳಗುಡ್ಡ
44.	ಹುಲಗೇರಿ
45.	ಇನಾಂ ಯರಗೊಪ್ಪ
46.	ಹಲಕುರ್ಕಿ
47.	ಹುಲ್ಲಿಕೇರಿ (ಹುಲ್ಲಿಕೇರಿ, ಇನಾಂ, ಹುಲ್ಲಿಕೇರಿ ತಾಂಡಾ ಗ್ರಾಮ)
48.	ಶಿವಪೂರ (ಶಿವಪೂರ, ನಾಗರಾಜ್, ಬನಶಂಕರಿ ಗ್ರಾಮ)